# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು**

{ ಯು.ಜಿ.ಸಿ. ಮಾನ್ಯತೆ(F.No. 14-5/2018 (DEB-1), Dated : 14–08–2018)}

ನಂ.ಕರಾಮುವಿ/ಡೀನ್(ಅ.ಕೇ)/ಕ.ಸ.ಕೇ/2216/2020–21 ದಿನಾಂಕ: ಜುಲೈ 10, 2020

**ಕರ್ನಾಟಕ ರಾಜ್ಯ ಪತ್ರದ (ಸಂಖ್ಯೆ : ಸಂವ್ಯಶಾಇ 35 ಶಾಸನ 2020 ದಿನಾಂಕ : 19–06–2020) ಅನುಸಾರ ದೂರಶಿಕ್ಷಣ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಒಳಗೆ ನಡೆಸುವ ಅಧಿಕಾರವನ್ನು ಹೊಂದಿರುವ ಏಕೈಕ ವಿಶ್ವವಿದ್ಯಾನಿಲಯವಾಗಿರುತ್ತದೆ.**

## ಅಧ್ಯಯನ ಕೇಂದ್ರ / ಕಲಿಕಾರ್ಥಿ ಸಹಾಯ–ಕೇಂದ್ರ ಸ್ಥಾಪನೆಗಾಗಿ ಅರ್ಜಿ ಆಹ್ವಾನ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಮುಕ್ತ ಮತ್ತು ದೂರಶಿಕ್ಷಣ' ಪದ್ಧತಿಯ ಅಡಿಯಲ್ಲಿ, ಕರ್ನಾಟಕ ರಾಜ್ಯದ'ಭೌಗೋಳಿಕ ವ್ಯಾಪ್ತಿಯಲ್ಲಿ ಶಿಕ್ಷಣ ನೀಡಲು ಅಧಿಕಾರ **ಹೊಂದಿರುವ ಏಕೈಕ ವಿಶ್ವವಿದ್ಯಾನಿಲಯವಾಗಿದೆ.** ಯು.ಜಿ.ಸಿ. ಮುಕ್ತ ಮತ್ತು ದೂರಶಿಕ್ಷಣ ನಿಯಮಾವಳಿ–2017ರ ಪ್ರಕಾರ, ಕಲಾ, ವಾಣಿಜ್ಯ, ವಿಜ್ಞಾನ ಮತ್ತು ಶಿಕ್ಷಣಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿಯನ್ನು ನೀಡುತ್ತಿದೆ. ಜೊತೆಗೆ, ಹಲವಾರು ಪಿ.ಜಿ. ಡಿಪ್ಲೊಮ, ಡಿಪ್ಲೊಮ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ.
- ಕರಾಮುವಿಯು ಕೇಂದ್ರ ಸ್ಥಾನ, ಪ್ರಾದೇಶಿಕ ಕೇಂದ್ರ, ಮತ್ತು ಅಧ್ಯಯನ ಕೇಂದ್ರ/ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ವಿದ್ಯಾರ್ಥಿ ಬೆಂಬಲ ಸೇವೆಯನ್ನು ಒದಗಿಸುತ್ತಲಿದೆ.
- ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣವನ್ನು ರಾಜ್ಯಾದ್ಯಂತ ಪರಿಣಾಮಕಾರಿಯಾಗಿ ನೀಡುವ ದೃಷ್ಟಿಯಿಂದ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರ (ಅಧ್ಯಯನ ಕೇಂದ್ರ) ಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ. ಈ ನಿಟ್ಟಿನಲ್ಲಿ ಅರ್ಹ ಶಿಕ್ಷಣ ಸಂಸ್ಥೆಗಳಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಜಿ ಸಲ್ಲಿಸಲು ಅಪೇಕ್ಷಿತ ಅರ್ಹತೆ :**
  - ವಿಶ್ವವಿದ್ಯಾನಿಲಯಗಳಿಂದ ಮಾನ್ಯತೆ ಪಡೆದ ಸರ್ಕಾರಿ/ ಖಾಸಗಿ / (ಅನುದಾನಿತ/ ಅನುದಾನ ರಹಿತ)/ ಕಾನ್ಸ್ಟಿಟ್ಯೂಯೆಂಟ್ / ಅಫಿಲಿಯೇಟೆಡ್ ಪದವಿ ಕಾಲೇಜುಗಳು.
  - ಕರಾಮುವಿ ನೀಡುತ್ತಿರುವ ಶೈಕ್ಷಣಿಕ ಕಾಯಕ್ರಮಗಳು ಅಧ್ಯಯನ ಕೇಂದ್ರವಾಗ ಬಯಸುವ ಕಾಲೇಜುಗಳಲ್ಲಿ ಬೋಧನೆಯಾಗುತ್ತಿರಬೇಕು.

ಕರಾಮುವಿ **"ಅಧ್ಯಯನ ಕೇಂದ್ರ / ಕಲಿಕಾರ್ಥಿ ಸಹಾಯ ಕೇಂದ್ರ"**ಗಳಾಗ ಬಯಸುವ ಸಂಸ್ಥೆಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ತುಂಬಿ ಆನ್‌ಲೈನ್‌ನಲ್ಲಿ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ, ಆನ್‌ಲೈನ್ ಸಹಾಯವಾಣಿ **ಸಂಖ್ಯೆ : 9663482133, 9663482311**ಯನ್ನು ಸಂಪರ್ಕಿಸುವುದು. ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯನ್ನು ಮುದ್ರಿಸಿ, ಅಂಚೆ ಮೂಲಕ ಅಥವಾ ಖುದ್ದಾಗಿ ದಿನಾಂಕ : **31–07–2020 ರ ರಂದು ಅಥವಾ ಒಳಗೆ *ಕುಲಸಚಿವರ ಕಚೇರಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–570 006*** ಇಲ್ಲಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ : ವಿಶ್ವವಿದ್ಯಾನಿಲಯದ ವೆಬ್‌ಸೈಟ್ http://ksoumysuru.ac.in ಇಲ್ಲಿಗೆ ಭೇಟಿ ನೀಡಬಹುದು ಅಥವಾ ಡೀನ್ (ಅಧ್ಯಯನ ಕೇಂದ್ರಗಳು) ಕಚೇರಿಯನ್ನು ದೂರವಾಣಿಯ ಸಂಖ್ಯೆ. 0821–2500980 ಮುಖಾಂತರ ಸಂಪರ್ಕಿಸಬಹುದು.

**ಇ–ಮೇಲ್ ವಿಳಾಸ :** registrar-ksou@ka.gov.in

**ಸಹಿ/–**

**ಕುಲಸಚಿವ**